1	2	3	4
1992-93	-	-	-
1993-94	15.30	-	-
1994-95	3.00	-	-
1995-96	1.00	-	-
1996-97	1.00	-	-
1997-98	1.00	-	-
1998-99	0.50	-	-
1999-2000	0.01	-	0-01

ಆ) ಮಜ್ಜೇರಿ ಏತ ನೀರಾವರಿ ಯೋಜನೆ ಕಾಮಗಾರಿಯ ಈಗಿನ ಅಂದಾಜು 215.00 ಲಕ್ಷ ರೂಗಳು, ಹಾಗೂ ನಿಟವಳ್ಳಿ ಏತ ನೀರಾವರಿ ಯೋಜನೆಗೆ 248.00 ಲಕ್ಷ ರೂಗಳು ಆಗಿರುತ್ತದೆ.

ರಾಣೆಬೆನ್ನೂರು ತಾಲ್ಲೂಕಿನ ಅಸುಂಡಿ ನಾಲಾ ಕೆರೆಯ ಬಗ್ಗೆ

1413 (1608) ಶ್ರೀ ಕೋಳಿವಾಡ ಕೃಷ್ಣಪ್ಪ ಭೀಮಪ್ಪ (ರಾಣೆಬೆನ್ನೂರು) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಣೆಬೆನ್ನೂರು ತಾಲ್ಲೂಕಿನಲ್ಲಿ ಅಸುಂಡಿ ನಾಲಾ ಕೆರೆಯನ್ನು ಕಟ್ಟಲು ಎಷ್ಟು ಎಕರೆ ಭೂಮಿಯನ್ನು ರೈತರಿಂದ ಸ್ವಾಧೀನಪಡಿಸಿ ಕೊಳ್ಳಲಾಗಿದೆ; ಮತ್ತು ಎಂದು ಸ್ವಾಧೀನ ಪಡಿಸಿಕೊಳ್ಳಲಾಗಿದೆ;

ಆ) ಈ ರೈತರಿಗೆ ಸ್ವಾಧೀನಪಡಿಸಿಕೊಂಡ ಭೂಮಿಗಳ ಕಿಮ್ಮತ್ತಿನ ಹಣವು ಎಷ್ಟು ಸಂದಾಯ ಮಾಗಬೇಕಾಗಿದೆ;

ಇ) ಈ ಹಣವನ್ನು ಸಂದಾಯ ಮಾಡಲು ಸರ್ಕಾರಕ್ಕೆ ಕಡತವನ್ನು ಸಲ್ಲಿಸಲಾಗಿದೆಯೇ;

ಈ) ಹಾಗಿದ್ದಲ್ಲಿ , ಎಂದು ರೈತರಿಗೆ ಹಣವನ್ನು ಸಂದಾಯ ಮಾಡಲಾಗುವುದು?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) 551 ಎಕರೆ 31 ಗುಂಟೆ (223 ಹೆಕ್ಟೇರ್-23ಎ) ಕ್ಷೇತ್ರವನ್ನು ಅಸುಂಡಿ ನಾಲಾ ಕೆರೆಗಾಗಿ 1984, 1986, 1988, 1989ರಲ್ಲಿ ಭೂ ಸ್ವಾಧೀನ ಪಡಿಸಿಕೊಳ್ಳಲಾಗಿದೆ.

ಆ) ಉಪ ವಿಭಾಗಾಧಿಕಾರಿಗಳ ಹೊರಡಿಸಿದ ತೀರ್ಪಿನ ಪ್ರಕಾರ ಇಲ್ಲಿಯವರೆಗೆ ಯಾವತ್ತೂ ಪರಿಹಾರಧನ ರೂ. 420178-00ಗಳನ್ನು ಈಗಾಗಲೇ ಸಂದಾಯ ಮಾಡಿದೆ. ಉಪವಿಭಾಗಾಧಿಕಾರಿಗಳು ನೀಡಿದ ಪರಿಹಾರ ಧನಕ್ಕೆ ತೃಪ್ತರಾಗದ ಭೂ ಹಿಡುವಳಿದಾರರು ನ್ಯಾಯಾಲಯಕ್ಕೆ ಮೊರೆಹೋದ ಪ್ರಕಾರ ನ್ಯಾಯಾಲಯವು ಭೂ ಪರಿಹಾರ ಧನವನ್ನು ಪರಿಷ್ಕರಿಸಿ ಹೊರಡಿಸಿದ ಆದೇಶಗಳ ಪ್ರಕಾರ ಇನ್ನೂ ರೂ. 2,45,85,264-00ಗಳನ್ನು ಪರಿಹಾರ ಧನ ಸಂದಾಯ ಮಾಡುವುದು ಬಾಕಿ ಇರುತ್ತದೆ.

ಇ)ಮತ್ತು ಈ)ಪ್ರಸ್ತಾವನೆ ಬಂದಿದೆ. ಆಯವ್ಯಯದಲ್ಲಿ ಸಾಕಷ್ಟು ಅನುದಾನ ಒದಗಿಸಿಲ್ಲದ ಕಾರಣ, ಈ ರೀತಿಯ ಹೆಚ್ಚುವರಿ ಅನುದಾನ ನೀಡಲು ಆಗುತ್ತಿಲ್ಲ. ಹೆಚ್ಚು ಅನುದಾನ ಒದಗಿಸಿಕೊಂಡು ಭೂ ಪರಿಹಾರ ನೀಡುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಸವದತ್ತಿ ತಾಲ್ಲೂಕಿನ ಮುರಗೋಡದಲ್ಲಿ 33 ಕೆ.ವಿ. ಸ್ಟೇಷನ್ ಪ್ರಾರಂಭ

1414 (1818) ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ (ಬೈಲಹೊಂಗಲ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ)ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕು ಮುರಗೋಡದಲ್ಲಿ 33 ಕೆ.ವಿ. ಸ್ಟೇಷನ್ ಪ್ರಾರಂಭಿಸಲು ಸಾರ್ವಜನಿಕರು ಉಚಿತವಾಗಿ ಜಮೀನು ನೀಡಿರುವುದು ನಿಜವಲ್ಲವೇ;

ಆ)ಈ ಕಾಮಗಾರಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿಯನ್ನು ಎಂದು ನೀಡಲಾಯಿತು; ಮತ್ತು ಎಷ್ಟು ಅಂದಾಜು ವೆಚ್ಚಕ್ಕೆ ಅನುಮತಿ ನೀಡಲಾಗಿದೆ;

ಇ)ಈ ಕೆಲಸ ಪ್ರಾರಂಭಿಸಲು ಯಾವ ತೊಂದರೆ ಇರುವುದು ಹಾಗೂ ಎಂದಿನಿಂದ ಈ ಕೆಲಸವನ್ನು ಪ್ರಾರಂಭಿಸಲಾಗುವುದು?

ಶ್ರೀ ವೀರಕುಮಾರ್ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ)ನಿಜವಲ್ಲ, ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕು ಮುರುಗೋಡ (ಹಲ್ಕಿ ಕ್ರಾಸ್)ದಲ್ಲಿ 33 ಕೆ.ವಿ. ವಿದ್ಯುತ್ ಉಪ ಕೇಂದ್ರದ ಸ್ಥಾಪನೆಗೆ ಅವಶ್ಯಕವಾದ ಜಮೀನನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು ಸದರಿ ಜಮೀನಿನ ಮೌಲ್ಯವನ್ನು ಪಾವತಿ ಮಾಡಿ ಖರೀದಿಸಿರುತ್ತದೆ.

ಆ)ಸದರಿ ಕಾಮಗಾರಿಗೆ ನಿಗಮದ ತಾಂತ್ರಿಕ ಸಮಿತಿಯು 27-12-1995ರಂದು ತಾಂತ್ರಿಕ ಮಂಜೂರಾತಿಯನ್ನು ಮತ್ತು ಈ ಕಾಮಗಾರಿಯ ವಿವರವಾದ ಯೋಜನಾ ವರದಿಗೆ ನಿಗಮದ ಕೇಂದ್ರ ಕಛೇರಿಯು ದಿನಾಂಕ:29-10-1998ರಂದು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿರುತ್ತದೆ. ಸದರಿ ಕಾಮಗಾರಿಯ ಅಂದಾಜು ವೆಚ್ಚವು 168.46ಲಕ್ಷ ರೂ.ಗಳಾಗಿರುತ್ತದೆ.

ಇ)ಸದರಿ ಸಬ್-ಸ್ಟೇಷನ್‌ನ ಸ್ಥಾಪನೆಗೆ ಅವಶ್ಯಕವಾದ ಜಮೀನನ್ನು ಇತ್ತೀಚಿಗಷ್ಟೇ ನಿಗಮದ ಸ್ವಾಧೀನಕ್ಕೆ ಪಡೆದುಕೊಳ್ಳಲಾಗಿದೆ. ಈ ಕಾಮಗಾರಿಯನ್ನು 'ಟರ್ನ್ ಕೀ' ಆಧಾರದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದ್ದು, ಇದೇ ವರ್ಷದಲ್ಲಿಯೇ ಕೈಗೆತ್ತಿಗೊಳ್ಳುವ ಗುರಿಯನ್ನು ಹೊಂದಲಾಗಿದೆ.

ಬೈಲಹೊಂಗಲದಲ್ಲಿ ಕೆವಿಎ ಸ್ಟೇಷನ್ ಪ್ರಾರಂಭಿಸಲು ಜಮೀನು ಖರೀದಿ

1415 (1819) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ)ಬೆಳಗಾವಿ ಜಿಲ್ಲೆ ಬೈಲಹೊಂಗಲದಲ್ಲಿ110 ಕೆ.ವಿ. ಸ್ಟೇಷನ್ ಪ್ರಾರಂಭಿಸಲು ಜಮೀನು ಖರೀದಿಸಲಾಗಿದೆಯೇ;